ಅ) ಭೂ ಸ್ವಾಧೀನ ಮತ್ತು ಸರ್ವೆ ಕೆಲಸಗಳು ಪೂರ್ಣಗೊಂಡ ನಂತರ ವಿವರವಾದ ಯೋಜನಾ ವರದಿಯನ್ನು ತಯಾರಿಸಿ, ನಿಗಮದ ಆಡಳಿತಾತ್ಮಕ ಅನುಮೋದನೆ ಪಡೆದ ಕೂಡಲೇ ಪ್ರಾರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದು.

ತುರುವೇಕೆರೆ ಪಟ್ಟಣ ಪಂಚಾಯ್ತಿಯನ್ನು ಐ.ಡಿ.ಎಸ್. ಎಂ.ಟಿ.ಗೆ. ಸೇರಿಸುವುದು

33(24) -ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ಅಣ್ಣಯ್ಯ) (ತುರುವೆಕೆರೆ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೆಕೆರೆ ಪಟ್ಟಣ ಪಂಚಾಯಿತಿಯನ್ನು ಈ ವರ್ಷ ಐ.ಡಿ.ಎಸ್.ಟಿ.ಎಂ.ಗೆ ಸೇರಿಸಲಾಗುವುದೇ?

ಆ) 2001-2002ನೇ ಸಾಲಿನಲ್ಲಿ ರಾಜ್ಯದ ಯಾವ ಯಾವ ನಗರ ಪಟ್ಟಣಗಳು ಈ ಯೋಜನೆಯಡಿ ಸೇರಿವೆ?

ಇ) ಐ.ಡಿ.ಎಸ್.ಟಿ. ಎಂ.ಟಿ.ಗೆ ಸೇರಿಸಲು ಯಾವ ಕ್ರಮವನ್ನು ಅನುಸರಿಸಲಾಗುವುದು?

ಶ್ರೀ ಡಿ.ಎಸ್. ಕುಮಾರ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು).

ಅ) ಮುಂದಿನ ರಾಜ್ಯ ಮಟ್ಟದ ಮಂಜೂರಾತಿ ಸಭೆಯಲ್ಲಿ ಮಂಡಿಸಿ ಈ ಪಟ್ಟಣವನ್ನು ಐ.ಡಿ.ಎಸ್.ಟಿ.ಎಂ.ಗೆ ಸೇರಿಸಲು ಕ್ರಮ ಜರುಗಿಸಲಾಗುವುದು.

ಆ) ಹಳಿಯಾಳ, ಬಂಟ್ವಾಳ, ಮೂಡಬಿದಿರಿ ನೆಲಮಂಗಲ, ಆಳ್ನಾವರ ಅಣ್ಣೀಗೇರಿ, ನರಗುಂದ, ಹೊಸದುರ್ಗ, ಬಳ್ಳಾರಿ, ಉಡುಪಿ, ಬಾಗಲಕೋಟೆ, ಹುಮ್ನಾಬಾದ್, ಬಸವನ ಬಾಗೇವಾಡಿ, ಚಳ್ಳಗೆರೆ, ನಂಜನಗೂಡು, ಮುಂಡಗೋಡ್, ಬಾಗೇಪಲ್ಲಿ.

ಇ) ಐ.ಡಿ.ಎಸ್.ಟಿ ಎಂ.ಟಿ ಯೋಜನೆಗೆ ಸೇರಿಸಲು ಕೇಂದ್ರ ಸರ್ಕಾರವು ನೀಡಿರುವ ಮಾರ್ಗದರ್ಶಿಯನ್ನು ಅನುಸರಿಸಿ ರಾಜ್ಯ ಮಟ್ಟದ ಮಂಜೂರಾತಿ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲಾಗುವುದು.

ಭಟ್ಕಳ ತಾಲ್ಲೂಕಿನಲ್ಲಿ ಇರತಕ್ಕ ಸಿಎಲ್ - 2 ಸಿವಿಲ್.2 ಹಾಗೂ ಸಿಎಲ್-9 ಬಗ್ಗೆ ಮಾಹಿತಿ

34(59) -ಶ್ರೀ ನಾಯಕ್ ಜೆಡಿ ಭಟ್ಕಳ: ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ತಾಲ್ಲೂಕಿನಲ್ಲಿ ಇರತಕ್ಕ ಸಿಎಲ್-2 ಸಿಎಲ್-7 ಹಾಗೂ ಸಿಎಲ್-9 ರ ಪರವಾನಗಿದಾರರ ಹೆಸರು ಹಾಗೂ ಮಾಹಿತಿ ಒದಗಿಸುವುದು.

ಆ) ಭಟ್ಕಳ ತಾಲ್ಲೂಕಿನಲ್ಲಿ ಸಿಎಲ್-2 ಪರವಾನಗಿದಾರರು ಬಾರ್ ಮತ್ತು ರೆಸ್ಟೋರೆಂಟ್ ರೀತಿ ವ್ಯವಹಾರ ನಡೆಸುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ?

ಇ) ಭಟ್ಕಳ ತಾಲ್ಲೂಕಿನಲ್ಲಿ ಎನ್ ಹೆಚ್-17 ಹಾಗೂ ನಗರದಲ್ಲಿ ಅನಧಿಕೃತ ಬಾರ್‌ಗಳು ತಲೆ ಎತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆಯಾ;

ಈ) ಸಿಎಲ್-2 ಪರವಾನಗಿದಾರರು ವ್ಯವಹರಿಸಲು ಇರುವ ಮಾನದಂಡಗಳೇನು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು)

ಅ) ಭಟ್ಕಳ ತಾಲ್ಲೂಕಿನಲ್ಲಿರುವ ಪರವಾನಗಿದಾರರ ಹೆಸರು ಮತ್ತು ಮಾಹಿತಿಯನ್ನು ಅನುಬಂಧ ಎ ಯಲ್ಲಿ ತೋರಿಸಿದೆ.

ಸನ್ನದುಗಳ ಸಂಖ್ಯೆ ಕೆಳಕಂಡಂತಿದೆ:-

(1) ಸಿಎಲ್ - 2 - 6

(2) ಸಿಎಲ್ - 7 - 2

(3) ಸಿಎಲ್ - 9 - 2

ಆ) ಇಲ್ಲ.

ಇ) ಇಲ್ಲ

ಈ) ಅನ್ವಯವಾಗುವ ಸನ್ನದು ಷರತ್ತುಗಳನ್ನು ಅನುಬಂಧ - ಬಿ ಯಲ್ಲಿ ತೋರಿಸಿದೆ.

ಅನುಬಂಧ

ಭಟ್ಕಳ ತಾಲ್ಲೂಕಿನಲ್ಲಿ ಇರುವ ಸಿ ಎಲ್ - 2 ಸಿಎಲ್-7 ಮತ್ತು ಸಿಎಲ್ -9
ಪರವಾನಿಗೆದಾರರ ಹೆಸರು ಮತ್ತು ವಿಳಾಸ

ಸಿ ಎಲ್-2 ಸನ್ನದುದಾರರು

1. ಶ್ರೀ ಜೆ.ವಿ. ನಾಯ್ಕ, ಬಂದರ್ ರಸ್ತೆ,
   ಡೋರ್ ನಂ. 26:1, ಭಟ್ಕಳ.
2. ಶ್ರೀ ಬಿ. ಜಯರಾಜ್ ಚಾಥನಿ,
   ಸರ್ವೆ ಸಂಃ 256, ಭಟ್ಕಳ
3. ಶ್ರೀ ಈಶ್ವರ ಈರಪ್ಪ ನಾಯ್ಕ
   ಡೋರ್ ನಂಃ622ಃ1,
   ಸರ್ವೆ ಸಂಃ596ಃ1 ಎ,
   ಮುರುಡೇಶ್ವರ, ಭಟ್ಕಳ ತಾಃ

4. ಶ್ರೀ ಬಿ.ಕೆ. ನಾಯ್ಕ,
ಶರಾಲಿ ಗ್ರಾಮ, ಡೋರ್ ನಂ. 1032ಃ1
ಸರ್ವೆ ಸಂಃ823, ಭಟ್ಕಳ ತಾಃ
ಉತ್ತರ ಕನ್ನಡ ಜಿಲ್ಲೆ.
5. ಶ್ರೀ ಎಸ್.ಎನ್. ನಾಯ್ಕ,
ಡೋರ್ ನಂ. 22ಃ2 ಎ, ಭಟ್ಕಳ
ಉತ್ತರ ಕನ್ನಡ ಜಿಲ್ಲೆ.
6. ಶ್ರೀ ಈಶ್ವರ ಶನಿಯಾರ ನಾಯ್ಕ,
ಡೋರ್ ನಂಃ386ಃ4,
ಮುರುಡೇಶ್ವರ ಭಟ್ಕಳ ತಾಃ

ಸಿ ಎಲ್-7 ಸನ್ನದುದಾರರು.

1. ಮೆಃ ಆಶೀರ್ವಾದ ಹೋಟೇಲ್ ಮತ್ತು ರೆಸ್ಟೋರೆಂಟ್
ಡೋರ್ ನಂಃ 856ಃ1
ಮುರುಡೇಶ್ವರ ಭಟ್ಕಳ ತಾಲ್ಲೂಕು
2. ಶ್ರೀ ಸುನೀಲ್ ಆರ್.ಶೆಟ್ಟಿ, ನಿರ್ದೇಶಕರು,
ಮೆಃ ರಿಸಾರ್ಟ್ ನವೀನ್ ಹೋಟೇಲ್
ಡೋರ್ ನಂಃ 399ಃ1, ಮಾವಳ್ಳಿಗ್ರಾಮ
ಭಟ್ಕಳ ತಾಲ್ಲೂಕು.

ಸಿ ಎಲ್-9 ಸನ್ನದುದಾರರು

1. ಶ್ರೀಮತಿ ಸುಧಾನಾರಾಯಣ ಶೆಟ್ಟಿ,
ಸುಸಗಡಿ ಗ್ರಾಮ, ಡೋರ್ ನಂಃ 378ಃಬಿ,
ಭಟ್ಕಳ ಶಹರ, ಉತ್ತರ ಕನ್ನಡ ಜಿಲ್ಲೆ.
2. ಶ್ರೀ ಈರಪ್ಪ, ಕಾಂಚನ ಗುಂಡಿ ನಾಯ್ಕ,
ಮಾವಿನ ಕುರ್ವೆ, ಬಂದರ್ ರಸ್ತೆ,
ಡೋರ್ ನಂಃ 98, ಸರ್ವೆ ಸಂಃ 15 ಬಿ

ಭಟ್ಕಳ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.

ಅನುಬಂಧ - ಬಿ

ಸಿಎಲ್ - 2 ಸನ್ನದಿನ ಷರತ್ತುಗಳು

1. ಸನ್ನದುದಾರನು 1965ನೇ ಅಬಕಾರಿ ಕಾಯಿದೆ ನಿಯಮಗಳಿಗೆ ಮತ್ತು ಕಾಲಕಾಲಕ್ಕೆ ನಿಗದಿಪಡಿಸಿದ ಯಾವುದೇ ಸಾಮಾನ್ಯ ಅಥವಾ ವಿಶೇಷ ಕಾನೂನುಗಳಿಗೆ ಬದ್ಧರಾಗಿರತಕ್ಕದ್ದು.

2. ಸನ್ನದಿಯಡಿ ಸನ್ನದುದಾರರು ಒಪ್ಪಿಸಿರುವ ಸರಕಿನ ಪಟ್ಟಿಯಲ್ಲಿ ನಮೂದಿಸಿರುವ ಸ್ವದೇಶಿ ಮದ್ಯ (ಸಾರಾಯಿ ಹೊರತುಪಡಿಸಿ) ವಿದೇಶಿ ಮದ್ಯ ಮಾತ್ರ ಮಾರಾಟ ಮಾಡಲು ಹಕ್ಕಿರುತ್ತದೆ. ಒಪ್ಪಿಸಿರುವ ಸರಕಿನ ಪಟ್ಟಿಯಲ್ಲಿ ಯಾವುದೇ ಬದಲಾವಣೆ ಮಾಡಬೇಕಾದಲ್ಲಿ ಜಿಲ್ಲಾಧಿಕಾರಿ (ಅಬಕಾರಿ) ಇವರ ಅನುಮತಿಯನ್ನು ಪಡೆಯಬೇಕಾಗಿರುತ್ತದೆ. ಬ್ರಾಂಡಿ, ವಿಸ್ಕಿ, ರಮ್ ಹಾಗೂ ಜಿನ್ ಮದ್ಯಗಳಾಗಿದ್ದಲ್ಲಿ 25 ಯು.ಪಿ. ಜಿನ್ ಆದಲ್ಲಿ 35 ಡಿಗ್ರಿ ಗಿಂತ ಕಡಿಮೆ ಸಾಮರ್ಥ್ಯದ (Strengtht) ಮತ್ತು ಬೀರ್ ಆದ ಪಕ್ಷದಲ್ಲಿ ಶೇ. 8 ರ ಆಲ್ಕೋಹಾಲಿನ ಪ್ರಮಾಣಕ್ಕಿಂತ ಜಾಸ್ತಿ ಆಗದ ಮದ್ಯಗಳನ್ನಲ್ಲದೇ ಯಾವುದೇ ಇತರೆ ಸಾಮರ್ಥ್ಯದ ಮದ್ಯಗಳು ಸಾಮಾನ್ಯವಾಗಿ ಒಪ್ಪಿರುವ ಸರಕಿನ ಪಟ್ಟಿಯಲ್ಲಿ ಸೇರಿಸಲು ಬರುವುದಿಲ್ಲ.

3. ಈ ಸನ್ನದು ಹೊಂದಿರುವವರು ಅಬಕಾರಿ ಸಬ್ ಇನ್ಸಪೆಕ್ಟರ್ ದರ್ಜೆಗೆ ಕಡಿಮೆಯಿಲ್ಲದ ಯಾವುದೇ ಅಬಕಾರಿ ಅಧಿಕಾರಿಗಳವರ ಕೋರಿಕೆಯ ಮೇರೆಗೆ ಈ ಸನ್ನದಿನ ಕಟ್ಟುಪಾಡಿಗೊಳಪಟ್ಟು ಮದ್ಯವನ್ನು ಮಾರಾಟ ಮಾಡಲು ತರಿಸಿಕೊಂಡ ಬಗ್ಗೆ ವಿವರಗಳುಳ್ಳ ಕಾಗದ ಪತ್ರಗಳನ್ನು ತನಿಖೆಗಾಗಿ ಒಪ್ಪಿಸಲು ಮತ್ತು ಸದರಿ ಮದ್ಯಗಳ ಸರಕಿನ ಪರೀಕ್ಷೆಗಾಗಿ ನಮೂನೆಗಳನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡಲು ಬದ್ಧರಾಗಿರುತ್ತಾರೆ.

4. ಸನ್ನದುದಾರರು ದಿನಿತ್ಯ ವ್ಯವಹಾರದ ಸರಿಯಾದ ಲೆಕ್ಕಗಳನ್ನು ಬರೆದಿಡಲು ಮತ್ತು ಪ್ರತಿ ತಿಂಗಳು ಸಂಬಂಧಪಟ್ಟ ಅಬಕಾರಿ ಅಧಿಕಾರಿಗಳಿಗೆ ಸದರಿ ವ್ಯವಹಾರಗಳ ಲೆಕ್ಕಗಳನ್ನು ಮುಂದಿನ ತಿಂಗಳ ಮೊದಲನೇ ವಾರದೊಳಗೆ ಸಲ್ಲಿಸಲು ಬದ್ಧರಾಗುತ್ತಾರೆ.

5. ಈ ಸನ್ನದು ಅಬಕಾರಿ ಕಾಯಿದೆಯ ಸೆಕ್ಷನ್ 29ರ ಡಿ ಅಡಿಯಲ್ಲಿ ಅಮಾನತ್ ಅಥವಾ ರದ್ದುಪಡಿಸಬಹುದಾಗಿರುತ್ತದೆ ಮತ್ತು ಸನ್ನದುದಾರರು ಅಥವಾ ಅವರ ನೌಕರರು ಈ ಸನ್ನದಿನ ಷರತ್ತುಗಳನ್ನು ಉಲ್ಲಂಘನೆ ಮಾಡಿದಲ್ಲಿ ಈ ಕಾಯ್ದೆಯ ಅಥವಾ ನಿಯಮಗಳ ಮತ್ತು ಕಾಯ್ದೆಯನ್ವಯ ಮಾಡಲ್ಪಟ್ಟ ಆಜ್ಞೆಗಳ ಕಟ್ಟುಪಾಡುಗಳಿಗೆ ಅನುಸಾರವಾಗಿ ಅವರುಗಳ ಮೇಲೆ ನ್ಯಾಯಾಲಯದಲ್ಲಿ ದಾವೆ ಹೂಡಲಾಗುವುದು.

6. ಈ ಸನ್ನದು ದಿನಾಂಕ: ಜೂನ್ 30 ರ ವರೆಗೆ ಜಾರಿಯಲ್ಲಿರುತ್ತವೆ.

7. ಸಾರ್ವಜನಿಕರಿಗೆ ಮಾರಲ್ಪಡುವ ಮದ್ಯಗಳು 0.180. 0.3000. 0.375. 0.600. 0.750 ಲೀ. ಹಾಗೂ 1,000 ಲೀ. ಪರಿಮಾಣದ ಮುಚ್ಚಿದ ಸೀಸೆಗಳಲ್ಲಿ ಬೀರು 0.325 ಮತ್ತು 0.650 ಲೀ. ಪರಿಮಾಣದ (capacity) ಮುಚ್ಚಿದ ಸೀಸೆಗಳಲ್ಲಿರತಕ್ಕದ್ದು. ಆದರೆ ಅಬಕಾರಿ ಆಯುಕ್ತರು ಬೇರೆ ಇನ್ನಾವುದೇ ಪ್ರಮಾಣದ ಮದ್ಯವನ್ನು ಮಾರಾಟ ಮಾಡಲು ಪರವಾನಿಗೆ ನೀಡಬಹುದಾಗಿದೆ. ಒಂದು ಬಾರಿಗೆ ಮಾರಲ್ಪಡುವ ಮದ್ಯ ಅಥವಾ ಬೀರು ಈ ಕೆಳಗೆ ತೋರಿಸಿರುವ ಪ್ರಮಾಣಕ್ಕಿಂತ ಹೆಚ್ಚಾಗಿರಬಾರದು.

1. ವಿದೇಶಿ ಮದ್ಯ	9.1 ಲೀ.ಗಳು
2. ಭಾರತೀಯ ಮದ್ಯ (ಸಾರಾಯಿ ಹೊರತು ಪಡಿಸಿ)	4.6 ಲೀ.ಗಳು
3. ಬೀರು	18.2 ಲೀ.ಗಳು

8. ಅಂಗಡಿಯಲ್ಲಿ ಮದ್ಯವನ್ನು ಕುಡಿಯಲು ನಿಷೇಧಿಸಿದೆ.

9. ಅಂಗಡಿ ತೆರೆಯುವ ಸಮಯ : ಬೆಳಿಗ್ಗೆ 10 ಗಂಟೆ, ಮುಚ್ಚುವ ಸಮಯಃ ರಾತ್ರಿ 10.30 ಗಂಟೆವರೆಗೆ.

ಬಾಗೇಪಲ್ಲಿ ಹಾಗೂ ಗುಡಿಬಂಡೆ ಪಟ್ಟಣದಲ್ಲಿನ ನಾಗರೀಕರಿಗೆ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಧಿಕವಾಗಿರುವುದು.

35(48) -ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ಹಾಗೂ ಗುಡಿಬಂಡೆ ಪಟ್ಟಣದಲ್ಲಿನ ನಾಗರೀಕರಿಗೆ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಧಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯವರು

ಅ) ಬಾಗೇಪಲ್ಲಿ ಹಾಗೂ ಗುಡಿಬಂಡೆ ಪಟ್ಟಣಗಳ ನಾಗರೀಕರಿಗೆ ಫ್ಲೋರೈಡ್ ರಹಿತ ಶುದ್ಧ ನೀರನ್ನು ಸರಬರಾಜು ಮಾಡಲು ಪರಗೋಡು ಹತ್ತಿರ ಚಿತ್ರಾವತಿ ನದಿಗೆ ಅಡ್ಡಲಾಗಿ ಹೊಸಕೆರೆಯನ್ನು ನಿರ್ಮಿಸಲು ಬೇಕಾಗುವ ಅಂದಾಜು ಪಟ್ಟಿಯನ್ನು ರೂ. 970.10 ಲಕ್ಷಗಳಿಗೆ ತಾಯಾರಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

ಸದ್ಯಕ್ಕೆ ಬಾಗೇಪಲ್ಲಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಪ್ರತ್ಯೇಕವಾಗಿ ರೂ. 159.00 ಲಕ್ಷಗಳ ಅಂದಾಜಿಗೆ ಸರ್ಕಾರದಿಂದ ಅನುಮೋದನೆ ದೊರೆತಿದ್ದು ಕಾಮಗಾರಿಗಳು ಪ್ರಗತಿಯಲ್ಲಿದೆ.